Karnatak Law Society's

**Vishwanathrao Deshpande Institute of Technology**

**(Approved by AICTE, New Delhi. Affiliated to VTU, Belagavi)**

**(Recognised Under Section 2(f) by UGC, New Delhi)**

**Udyog Vidya Nagar, Haliyal – 581329, Dist: Uttar Kannada (Karnataka)**

**Phone: 08284-220861, 220334, 221409, Fax: 08284-220813**

**www.klsvdit.edu.in principal@klsvdit.edu.in**

Date: 4-08-2022

**ಪತ್ರಿಕಾ ಪ್ರಕಟಣೆ:**

## ಕರ್ನಾಟಕ ರಾಜ್ಯ ಸರಕಾರದ ಕೆ–ಟೆಕ್ ಜೊತೆ ವಿ.ಡಿ.ಐ.ಟಿ. ಒಡಂಬಡಿಕೆ

ಕರ್ನಾಟಕ ರಾಜ್ಯ ಸರಕಾರದ ಐಟಿ/ಬಿಟಿ ಇಲಾಖೆಯ ಅಂಗ ಸಂಸ್ಥೆಯಾದ ಕೆ–ಟೆಕ್ ನೊಂದಿಗೆ ಕೆ.ಎಲ್.ಎಸ್. ವಿ.ಡಿ.ಐ.ಟಿ. ಹಳಿಯಾಳ ಒಡಂಬಡಿಕೆ ಮಾಡಿಕೊಂಡಿದೆ. ಮಹಾವಿದ್ಯಾಲಯವು ಕೆ–ಟೆಕ್ ನ್ಯೂ ಏಜ್ ಇನ್ನೋವೇಶನ್ ನೆಟ್ವರ್ಕ್ ಎಂಬ ಪ್ರಾಜೆಕ್ಟ್ ವಿಕಸನ ಕೇಂದ್ರವನ್ನು ಹೊಂದಿದ್ದು ಸ್ಥಳೀಯ ಸಮಸ್ಯೆಗಳಿಗೆ ಪರಿಹಾರವನ್ನು ಅಭಿವೃದ್ಧಿಪಡಿಸುವದರಲ್ಲಿ ಕಾರ್ಯಪ್ರವೃತ್ತವಾಗಿದೆ.ವಿದ್ಯಾರ್ಥಿಗಳು ಅಭಿವೃದ್ಧಿ ಪಡಿಸುವ ಜನಪಯೋಗಿ ಪ್ರಾಜೆಕ್ಟ್‌ಗಳಿಗೆ ಮೂಲಸೌಕರ್ಯ, ತಂತ್ರಜ್ಞಾನ ಮತ್ತು ಆರ್ಥಿಕ ಸಹಾಯವನ್ನು ಇಲ್ಲಿ ನೀಡಲಾಗುತ್ತಿದೆ. ಮಹಾವಿದ್ಯಾಲಯವು ಕೆ–ಟೆಕ್ ಜೊತೆ 3 ವರ್ಷದ ಅವಧಿಯ ಒಡಂಬಡಿಕೆಯನ್ನು ಹೊಂದಿತ್ತು, ವಿದ್ಯಾರ್ಥಿಗಳು ನೂತನವಾಗಿ ಅಭಿವೃದ್ಧಿಪಡಿಸುತ್ತಿರುವ ಜನೋಪಯೋಗಿ ಪ್ರಾಜೆಕ್ಟ್‌ಗಳಿಂದಾಗಿ ಮತ್ತೆರಡು ವರ್ಷ ತನ್ನ ಒಡಂಬಡಿಕೆಯನ್ನು ಮಹಾವಿದ್ಯಾಲಯದೊಂದಿಗೆ ಮುಂದುವರಿಸಲು ನಿರ್ಧರಿಸಿದೆ. ಈಗಾಗಲೇ ವಿದ್ಯಾರ್ಥಿಗಳ 10 ಪ್ರಾಜೆಕ್ಟ್‌ಗಳಿಗೆ 13.83 ಲಕ್ಷ ಅನುದಾನ ನೀಡಿದ್ದು, ಒಡಂಬಡಿಕೆಯ ನವೀಕರಣದಿಂದ ಇನ್ನೂ ಹೆಚ್ಚಿನ ಪ್ರಾಜೆಕ್ಟ್‌ಗಳಿಗೆ ಮುಂದಿನ ದಿನಗಳಲ್ಲಿ ಅನುದಾನ ನೀಡಲಿದೆ. ಅಷ್ಟೇ ಅಲ್ಲದೆ ಹಳಿಯಾಳ ತಾಲೂಕಿನ ಒಂದು ಪ್ರಾಥಮಿಕ / ಪ್ರೌಢಶಾಲೆ ಹಾಗೂ ಪದವಿ ಪೂರ್ವ ಕಾಲೇಜನ್ನು ದತ್ತು ತೆಗೆದುಕೊಂಡು ಔದ್ಯಮಶೀಲತೆಯನ್ನು ಉತ್ತೇಜಿಸುವ ತರಬೇತಿ ನೀಡಲು ಮಹಾವಿದ್ಯಾಲಯಕ್ಕೆ ಸೂಚಿಸಿದ್ದು, ಅದರ ವೆಚ್ಚ ಭರಿಸುವುದಾಗಿ ಇಲಾಖೆ ಹೇಳಿದೆ.

ಅತ್ಯಾಧುನಿಕ ಸಿಸಿಟಿವಿ ಅವಸ್ಥೆ, ಹಿಂದುಳಿದ ಪ್ರದೇಶಗಳಲ್ಲಿ ಬೆಳಕು ಮತ್ತು ಜಲ ಶುದ್ಧೀಕರಣಕ್ಕಾಗಿ ಸೌರಶಕ್ತಿಯ ಬಳಕೆ, ಸ್ವಯಂ ಚಾಲಿತ ವಾಹನ ಲೈಸೆನ್ಸ್ ವಿತರಣಾ ಯಂತ್ರ, ಸುರಕ್ಷಿತ ವಾಹನ ಚಾಲನೆ ಗಾಗಿ ಕೃತಕ ಬುದ್ಧಿಮತ್ತೆ ಬಳಕೆ, ಕೃಷಿ ಉತ್ಪನ್ನಗಳ ಲಾಭದಾಯದ ವಹಿವಾಟಿಗಾಗಿ ಮಾಹಿತಿ ತಂತ್ರಜ್ಞಾನ, ಸುಧಾರಿತ ಆನ್ಲೈನ್ ಹಣ ಪಾವತಿ ವ್ಯವಸ್ಥೆ, ದಾಳಿಂಬೆ/ ಹತ್ತಿ ಎಲೆಯ ರೋಗಪತ್ತೆ ಮತ್ತು ರಸ್ತೆ ನಿರ್ಮಾಣದಲ್ಲಿ ತ್ಯಾಜ್ಯ ಪಾಲಿಮರ್ ಬಳಕೆ ಎಂಬ 10 ಪ್ರಾಜೆಕ್ಟ್ ಗಳನ್ನು ಈಗಾಗಲೇ ಮಹಾವಿದ್ಯಾಲಯದ ಉಪನ್ಯಾಸಕರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಅಭಿವೃದ್ಧಿ ಪಡಿಸುತ್ತಿದ್ದಾರೆ.

ಕೆ–ಟೆಕ್ ನ ಮೂರನೇ ಹಂತದ ಈ ಕಾರ್ಯ ಯೋಜನೆಯ ಅಡಿಯಲ್ಲಿ ರಾಜ್ಯದ 12 ತಾಂತ್ರಿಕ ಮಹಾವಿದ್ಯಾಲಯಗಳು ಆಯ್ಕೆಯಾಗಿದ್ದು, ಉತ್ತರ ಕನ್ನಡ ಜಿಲ್ಲೆಯಲ್ಲಿ ಆಯ್ಕೆಯಾಗಿರುವ ಏಕೈಕ ಮಹಾವಿದ್ಯಾಲಯ ವಿ.ಡಿ.ಐ.ಟಿ. ಆಗಿರುವುದು ಹೆಮ್ಮೆಯ ವಿಷಯವೆಂದು ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ.ವಿನಾಯಕ ಲೋಕೂರ್ ಅವರು ಹೇಳಿದರು. ಕೆ–ಟೆಕ್ ಮಹಾವಿದ್ಯಾಲಯ ದೊಂದಿಗಿನ ಒಡಂಬಡಿಕೆಯನ್ನು ಎರಡು ವರ್ಷ ವಿಸ್ತರಿಸಿರುವುದು ಹರ್ಷ ತಂದಿದೆ ಮತ್ತು ಮುಂದಿನ ದಿನಗಳಲ್ಲಿ ವಿದ್ಯಾರ್ಥಿಗಳು ಸಮಾಜ ಉಪಯೋಗಿ ಪ್ರಾಜೆಕ್ಟ್ ಗಳನ್ನು ಅಭಿವೃದ್ಧಿಪಡಿಸುತ್ತಾರೆ ಎಂದು ಪ್ರಾಂಶುಪಾಲರಾದ ಡಾ.ವಿ.ಎ. ಕುಲಕರ್ಣಿ ಹೇಳಿದರು. ಕೆ–ಟೆಕ್ ಸಂಚಾಲಕರಾದ ಡಾ. ಕೆ. ಎಸ್. ಪೂಜಾರ್, ಮಹಾವಿದ್ಯಾಲಯದ ಎಲ್ಲಾ ಸಿಬ್ಬಂದಿಗಳು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಪ್ರಾಂಶುಪಾಲರು

**Principal**
KLS Vishwanathrao Deshpande
Institute of Technology, Haliyal


K-ಟೆಕ್
K-tech
INNOVATE